ಕೊಪ್ಪಳ ನಗರದ ಕುಡಿಯುವ ನೀರಿನ ಯೋಜನೆ

1230 (1600) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೊಪ್ಪಳ ನಗರದಲ್ಲಿ ನಾಗರೀಕರಿಗೆ ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ, ಆ ಬಗ್ಗೆ ಯೋಜನೆಯನ್ನು ಕೈಗೆತ್ತಿಕೊಂಡಿದ್ದರೆ ಅದು ಯಾವ ಹಂತದಲ್ಲಿದೆ. ಯೋಜನೆಯ ಕಾಮಗಾರಿಯ ವಿವರವನ್ನು ಸಂಪೂರ್ಣವಾಗಿ ಒದಗಿಸುವುದು ಮತ್ತು ಈ ಯೋಜನೆಯ ನಿರ್ಮಾಣ ಕಾರ್ಯ ಯಾವಾಗ ಮುಕ್ತಾಯವಾಗಲಿದೆ.

2) ಯೋಜನೆಗೆ ಇದುವರೆವಿಗೂ ಬಿಡುಗಡೆಯಾದ ಮೊತ್ತವೆಷ್ಟು?

ಶ್ರೀ ಎಸ್. ಎಂ. ಕೃಷ್ಣ (ಮುಖ್ಯ ಮಂತ್ರಿಯವರು)

1) ಬಂದಿದೆ.

ರೂ. 900.00 ಲಕ್ಷಗಳ ಕೊಪ್ಪಳ ನೀರು ಸರಬರಾಜು ಯೋಜನೆಯನ್ನು ಕೈಗೊಂಡಿದ್ದು ಸಣ್ಣ ಪುಟ್ಟ ಕಾಮಗಾರಿಗಳನ್ನು ಹೊರತುಪಡಿಸಿ ಕಾರ್ಯಗತಗೊಳಿಸಲಾಗಿದೆ. ವಿತರಣಾ ಜಾಲದ ಕೊರತೆ ಮತ್ತು ಸಾಕಷ್ಟು ಜಲ ಸಂಗ್ರಹಣಾಗಾರಗಳು ಇಲ್ಲದೆ ಇರುವುದರಿಂದ, ಪಟ್ಟಣದ ಕೆಲವು ಭಾಗಗಳಲ್ಲಿ ನೀರಿನ ವಿತರಣೆಯಲ್ಲಿ ತೊಂದರೆಯಿದೆ.

ಇದನ್ನು ಪರಿಹರಿಸಲು ರೂ. 419.00 ಲಕ್ಷಗಳ ಅಂದಾಜುಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

2) ಇದುವರೆವಿಗೂ ರೂ. 900.00 ಲಕ್ಷಗಳು ಈ ಯೋಜನೆಗೆ ಬಿಡುಗಡೆಯಾಗಿರುತ್ತದೆ.

ಬಚಾವತ್ ಆಯೋಗದ ವ್ಯಾಪ್ತಿಯಲ್ಲಿ ರಾಜ್ಯದ ನೀರಿನ ಪ್ರಮಾಣ

1231 (1601) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಮಾನ್ಯ ಜಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಚಾವತ್ ಆಯೋಗದ ತೀರ್ಪಿನ ಹಿನ್ನೆಲೆಯಲ್ಲಿ 2001ನೇ ಸಾಲಿನ ಬಿ. ಸ್ಕೀಮಿನ ಕೆಲಗಡೆ ರಾಜ್ಯದ ನೀರಿನ ಪ್ರಮಾಣದ ಟಿ.ಎಂ.ಸಿ. ನೀರು ಎಷ್ಟು ಇದೆ?

ಆ) ರಾಜ್ಯದ ಸ್ಕೀಮಿನ ವ್ಯಾಪ್ತಿಯಲ್ಲಿ ಬರುವ ನೀರಿನ ಪ್ರಮಾನದ ಕೆಳಗಡೆ ರಾಜ್ಯದ ಯಾವ ಯಾವ ಯೋಜನೆಗಳನ್ನು ಘೋಷಿಸಲಾಗಿದೆ. ಉತ್ತರ ಕರ್ನಾಟಕ ಕೊಪ್ಪಳ ಜಿಲ್ಲೆಯ ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕಿಗೆ ನೀರಾವರಿಗೆ ಸರ್ವೆ ಕಾರ್ಯ ಆಡಲಾಗಿದೆಯೇ; ಸರ್ವೆ ಕಾರ್ಯ ಮಾಡಿದ್ದರೆ ಎಷ್ಟು ಪ್ರಮಾಣದಲ್ಲಿ ಮಾಡಲಾಗಿದೆ?

ಶ್ರೀ ಎಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಸುಪ್ರೀಮ ಕೋರ್ಟ್‌ನ ಸಂವಿಧಾನ ಪೀಠವು ಏಪ್ರಿಲ್ 200 ದಲ್ಲಿ ಕೊಟ್ಟ ತೀರ್ಪಿನಂತೆ ಸ್ಕೀಂ 'ಬಿ' ಅನ್ನು ಅನ್ವಯ ಕರ್ನಾಟಕಕ್ಕೆ 183 ಟಿ ಎಂಸಿ ಹೆಚ್ಚುವರಿ ನೀರು ದೊರೆಯಬೇಕಾಗಿದೆ.

ಆ) ಬಿ ಸ್ಕೀಂ ಇನ್ನೂ ಅನುಷ್ಠಾನಕ್ಕೆ ಬಾರದೇ ಇರುವುದರಿಂದ, ಯಾವ ಯೋಜನೆಗಳನ್ನೂ ಘೋಷಿಸಿರುವುದಿಲ್ಲ. 'ಬಿ' ಸ್ಕೀಂ ಅಡಿಯಲ್ಲಿ ಯೋಜನೆಗಳನ್ನು ಗುರುತಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ. ವರದಿ ನಿರೀಕ್ಷಿಸಲಾಗಿದೆ ಉತ್ತರ ಕರ್ನಾಟಕದ ಕೊಪ್ಪಳ ಜಿಲ್ಲೆಯ ಕೊಪ್ಪಳ ಮತ್ತು ಯಲಬುರ್ಗಾ ತಾಲ್ಲೂಕುಗಳಲ್ಲಿ ಯಾವುದೇ ಸರ್ವೆ ಕೆಲಸ ತೆಗೆದುಕೊಂಡಿರುವುದಿಲ್ಲ.

ಸವದತ್ತ ತಾಲ್ಲೂಕಿನಲ್ಲಿ ಕೆರೆಗಳ ಹೂಳೆತ್ತುವುದು

1232 (1719) ಶ್ರೀ ಮಹಾಂತೇಶ ಎಸ್.ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ್ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಕೆರೆಗಳಿಂದ ಸಿದ್ದಸಮುದ್ರ ಬುದರಕಟ್ಟಿ ಕೊಡ್ಡವಾಡ ಬೈಲವಾಡ ಹಾಗೂ ಸವದತ್ತಿ ತಾಲ್ಲೂಕಿನ ಹಿರೇಕೊಪ್ಪ ಮಳಗಲಿ ಹಿರೇಬುದನೂರ, ಮರಕುಮಚಿ ಇಂಚಲ ಗ್ರಾಮದ ಕೆರೆಗಳ ಹೂಳೆತ್ತಲು ವಿಶ್ವಬ್ಯಾಂಕ್ ಅಥವಾ ಇಲಾಖೆಯ ಯಾವುದಾದರೊಂದು ಯೋಜನೆಯಲ್ಲಿ ಕ್ರಮ ಕೈಗೊಳ್ಳಲಾಗುವುದೇ;

ಆ) ಈ ಪ್ರತಿಯೊಂದು ಕೆರೆಯ ಹೂಳೆತ್ತಲು ಎಷ್ಟು ಖರ್ಚು ತಗಲಬಹುದು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಬೆಳಗಾಂವ್ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಿದ್ದ ಸಮುದ್ರ ಕೆರೆ ಮತ್ತು ಸವದತ್ತಿ ತಾಲ್ಲೂಕಿನ ಹಿರೇಕೊಪ್ಪ, ಮಳಗಟ್ಟಿ, ಹಿರೇಬೂದನೂರ, ಮರಕುಂಚಿ ಮತ್ತು ಇಂಚಲ ಕೆರೆಗಳು ಮಾತ್ರ ಸಣ್ಣ ನೀರಾವರಿ ವ್ಯಾಪ್ತಿಯಲ್ಲಿರುತ್ತವೆ. ಬೈಲಹೊಂಗಲ ತಾಲ್ಲೂಕಿನ ಬುಡರಕಟ್ಟಿ ದೊಡ್ಡವಾದ ಬೈಲವಾಡ ಕೆರೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಒಳಪಡುತ್ತವೆ. ರೈತರ ಸಹಭಾಗಿತ್ವದಲ್ಲಿ ಹೂಳೆತ್ತುವ ಕಾರ್ಯಕ್ರಮದಡಿಯಲ್ಲಿ ಮುಂದಿನ ವರ್ಷಗಳ ಆಯವ್ಯಯದಲ್ಲಿ ಅನುದಾನ ಲಭ್ಯತೆ ಆಧರಿಸಿ ಆದ್ಯತೆಯ ಮೇಲೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪ್ರಯತ್ನಿಸಲಾಗುವುದು. ಅಲ್ಲದೆ ಜಲಸಂವರ್ಧನೆ ಯೋಜನೆಯಡಿಯಲ್ಲಿ ವಿಶ್ವಬ್ಯಾಂಕ್‌ನ ನೀತಿ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಬರುವುದಾದಲ್ಲಿ ಹೂಳೆತ್ತುವುದೂ ಸೇರಿದಂತೆ ಈ ಕೆರೆಗಳ ಸಮಗ್ರ ಅಭಿವೃದ್ಧಿ ಕೂಡ ಕೈಗೊಳ್ಳಲಾಗುವುದು.

ಆ) ಈ ಕೆರೆಗಳ ತಗಲಬಹುದಾದ ಅಂದಾಜು ವೆಚ್ಚವು ಕೆಳಗಿನಂತಿದೆ.

1)	ಸಿದ್ದಸಮುದ್ರ ಕೆರೆ ಹೂಳೆತ್ತುವುದು	16.00 ಲಕ್ಷಗಳು
2)	ಹಿರೇಕೊಪ್ಪ ಕೆರೆ ಸವದತ್ತಿ ತಾಲ್ಲೂಕು	8.00 ಲಕ್ಷಗಳು
3)	ಮಳಗಲಿ ಕೆರೆ ಸವದತ್ತಿ ತಾಲ್ಲೂಕು	10.00 ಲಕ್ಷಗಳು